**ಸಾಕ್ಷಿಯನ್ನು ದಿನಾಂಕಃ 08.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಜಿ.ಎಸ್.ಎಸ್. ವಕೀಲರಿಂದಃ**

ಮೃತ 1 ನೇ ಪ್ರತಿವಾದಿ 2 ಮತ್ತು 3 ನೇ ಪ್ರತಿವಾದಿಗಳ ತಂದೆಯಾಗಿರುತ್ತಾರೆ. ಪ್ರತಿವಾದಿ1(ಎ) ರಿಂದ ಪ್ರತಿವಾದಿ1(ಜಿ) ರವರು ಕೂಡ ಮೃತ 1 ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ. ಕ್ರಯದ ಕರಾರು ಪತ್ರ ಮಾಡಿಕೊಡುವ ಸಮಯದಲ್ಲಿ ಪ್ರತಿವಾದಿ1(ಎ) ರಿಂದ ಪ್ರತಿವಾದಿ1(ಜಿ) ರವರು ಸಹಿ ಮಾಡಿರುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರಿದು ಮೃತ 1 ನೇ ಪ್ರತಿವಾದಿ ತನ್ನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಮತ್ತು 2 ಮತ್ತು 3 ನೇ ಪ್ರತಿವಾದಿಗಳು ಹೆಚ್.ಡಿ. ಕೋಟೆಯಲ್ಲಿರುವುದರಿಂದ ಅವರ ಸಹಿ ಹಾಕಿಸುತ್ತಿದ್ದೇನೆಂದು ಹೇಳಿರುತ್ತಾರೆ, ಉಳಿದವರ ಸಹಿ ಹಾಕಿಸಿರುವುದಿಲ್ಲ. ನಿ.ಪಿ.-1 ನ್ನುಬರೆದುಕೊಟ್ಟಿರುತ್ತಾರೆಂದು ಹೇಳಿರುವ ಪೂರ್ವದಲ್ಲಿ ಮೃತ 1 ನೇ ಪ್ರತಿವಾದಿ ಯಾವತ್ತೂ ಕೂಡ ದಾವಾ ಸ್ವತ್ತನ್ನು ಮಾರಾಟ ಮಾಡುತ್ತೇನೆಂದು ನನ್ನ ಬಳಿ ಬಂದಿರುವುದಿಲ್ಲವೆಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಸುಮಾರು 7-8 ವರ್ಷಗಳಿಂದ ಪರಿಚಯಸ್ಥರಾಗಿರುತ್ತೇವೆ. ನಾನು ಮತ್ತು 2 ನೇ ಪ್ರತಿವಾದಿ ಸುಮಾರು 20-25 ವರ್ಷಗಳಿಂದ ಸ್ನೇಹಿತರಾಗಿರುತ್ತೇವೆಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಸ್ನೇಹಿತರಾಗಿದ್ದರಿಂದ, 2 ನೇ ಪ್ರತಿವಾದಿ ನನ್ನ ಬಳಿ ಹಣ ಪಡೆದು ವಾಪಸ್ ಕೊಡುವ ವ್ಯವಹಾರ ಇಟ್ಟುಕೊಂಡಿದ್ದರು ಮತ್ತು ಅವರು ಪಡೆದ ಹಣಕ್ಕೆ ಬಡ್ಡಿಯನ್ನು ಸಹ ಕೊಡುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮನೆ ಕಟ್ಟುವ ಉದ್ದೇಶದಿಂದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ನಿಂದ ಸಾಲ ಪಡೆದಿದ್ದರು ಎಂದರೆ ಮೃತ 1 ನೇ ಪ್ರತಿವಾದಿ ಪಡೆದಿದ್ದರು. 2 ನೇ ಪ್ರತಿವಾದಿ ಹೆಚ್.ಡಿ. ಕೋಟೆಯ ಮುಸ್ಲಿಂ ಬ್ಲಾಕ್ ನಲ್ಲಿ ಮನೆ

ಕಟ್ಟಿರುತ್ತಾರೆಂದರೆ ಸರಿ. ಸದರಿ ಮನೆ ಕಟ್ಟುವ ಸಂದರ್ಭದಲ್ಲಿಯೇ 2 ನೇ ಪ್ರತಿವಾದಿ ಮೈಸೂರು ಬ್ಯಾಂಕ್ ನಲ್ಲಿ ಸಾಲ ಪಡೆದಿರುತ್ತಾರೆಂದರೆ ಸರಿ. ನಂತರ 2 ನೇ ಪ್ರತಿವಾದಿ ಬ್ಯಾಂಕ್ ಗೆ ಪಾವತಿಸಬೇಕಾದ ಸಾಲದ ಹಣವನ್ನು ಮರುಪಾವತಿಸಿಲ್ಲ ಎಂಬ ಕಾರಣಕ್ಕೆ ಮನೆಯನ್ನು ಹರಾಜು ಮಾಡಲು ಸಿದ್ದತೆ ನಡೆಸಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ನಾನು ಬ್ಯಾಂಕ್ ಗೆ ಪಾವತಿಸಬೇಕಾದ ಸಾಲದ ಹಣವನ್ನು ಪಾವತಿಸಿರುತ್ತೇನೆಂದರೆ ಸರಿ. ನಂತರ ನಾನು ಬ್ಯಾಂಕ್ ಗೆ ಪಾವತಿಸಿದ ಸಾಲದ ಹಣ ಮತ್ತು ಅದಕ್ಕೆ ತಗಲುವ ಎಲ್ಲಾ ಬಡ್ಡಿ ಸೇರಿಸಿ ನನ್ನ ಹೆಸರಿಗೆ 2 ನೇ ಪ್ರತಿವಾದಿ ಕಟ್ಟಿದ್ದ ಮನೆಯನ್ನು ಬರೆಸಿಕೊಂಡಿರುತ್ತೇನೆಂದರೆ ಸರಿ. ಈ ಮೇಲೆ ಹೇಳಿದ ಪ್ರಕ್ರಿಯೆಯು 2012 ರಲ್ಲಿ ನಡೆದಿರುತ್ತದೆ. ಸದರಿ ಮನೆ ಈಗ ನನ್ನ ಸ್ವಾಧೀನದಲ್ಲಿರುತ್ತದೆ. ಅದೇ ಸಮಯದಲ್ಲಿ 2 ನೇ ಪ್ರತಿವಾದಿ ಪುನಃ ನನ್ನ ಬಳಿ ರೂ. 2,00,000/- ಸಾಲ ಬೇಕೆಂದು ಕೇಳಿದ್ದು, ಅದಕ್ಕೆ ನಾನು ಭದ್ರತೆಗಾಗಿ ದಾಖಲೆ ಮಾಡಿಕೊಟ್ಟರೆ ಕೊಡುತ್ತೇನೆಂದು ಹೇಳಿರುತ್ತೇನೆಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಹರಾಜು ಮಾಡಲು ಸಿದ್ದತೆ ನಡೆಸಿದ್ದ 2 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಮನೆಯನ್ನು ಹೊರತುಪಡಿಸಿ 2 ನೇ ಪ್ರತಿವಾದಿಗಳಿಗೆ ಬೇರೆ ಯಾವುದೇ ಆಸ್ತಿ ಇರಲಿಲ್ಲವಾದ್ದರಿಂದ 2 ನೇ ಪ್ರತಿವಾದಿ ತನ್ನ ತಂದೆಯನ್ನು ಕರೆದುಕೊಂಡು ಬಂದು ಅದರ ಭದ್ರತೆಗಾಗಿ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿ.ಪಿ.-1 ನ್ನು ಮಾಡಿಕೊಳ್ಳು ಪೂರ್ವದಲ್ಲಿ ನನಗೆ ಯಾವುದೇ ವ್ಯವಸಾಯದ ಜಮೀನುಗಳು ಇರುವುದಿಲ್ಲವೆಂದರೆ ನನ್ನ ತಾತಬ ಹೆಸರಿನಲ್ಲಿ ಜಮೀನುಗಳಿದ್ದವು. ಸ.ನಂ. 166 ರಲ್ಲಿ 01 ಎಕರೆ ಜಮೀನು ನನ್ನ ತಾತನ ಹೆಸರಿನಲ್ಲಿತ್ತು. ಸದರಿ ಜಮೀನನ್ನು ನಾನು ಮತ್ತು ಸಹೋದರರೆಲ್ಲಾ ಸೇರಿ ಭಾಗ

ಮಾಡಿಕೊಂಡಿರುತ್ತೇವೆ. ಸದರಿ ಜಮೀನು ವ್ಯವಸಾಯದ ಜಮೀನಾಗಿರುತ್ತದೆ. ಸದರಿ ಜಮೀನಿನ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ಮೃತ 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ ಮಾತುಕತೆ ಮಾಡಲು 2 ಮತ್ತು 3 ನೇ ಪ್ರತಿವಾದಿಗಳನ್ನು ಕರೆದುಕೊಂಡು ಬಂದಿದ್ದರು. ಆ ಸಂದರ್ಭದಲ್ಲಿ ಪಹಣಿ ಪತ್ರಿಕೆ ಮತ್ತು ಸಾಗುವಳಿ ಚೀಟಿಯನ್ನು ಕೊಟ್ಟಿರುತ್ತಾರೆ. ಉಳಿದ ದಾಖಲೆಗಳನ್ನು ನೋಂದಣಿ ಸಮಯದಲ್ಲಿ ಕೊಡುತ್ತೇನೆಂದು ಹೇಳಿರುತ್ತಾರೆ. ಮಾತುಕತೆಯಾಗುವ ಸಮಯದಲ್ಲಿ ಮೃತ 1 ನೇ ಪ್ರತಿವಾದಿ ನೀಡಿದ್ದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**